IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಜಾನಪದ ಲೋಕ ಮತ್ತು ಕನ್ನಡ ಸಂಸ್ಕೃತಿ

ಪಿ ಲೋಹಿತ್
ಕನ್ನಡ ಸಹಾಯಕ ಪ್ರಾಧ್ಯಾಪಕರು
ಡಿ.ವಿ.ಎಸ್ ಕಲಾ,ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು,
ಶಿವಮೊಗ್ಗ

**Abstract:** ಬಯಲು ನೆಲೆಯ ಜಾನಪದ ಲೋಕ ಹಾಗೂ ಆಲಯ ನೆಲೆಯ ಶಿಷ್ಟ ಪರಂಪರೆಗಳ ನಡುವೆ ಸಾಧ್ಯವಾಗಿರುವ ಸಾಂಸ್ಕೃತಿಕ ಚರಿತ್ರೆಯನ್ನು ಅವಲೋಕಿಸುವುದು ವಿಶ್ವಾತ್ಮಕ ಅರಿವಿನ ದ್ಯೋತಕ. "ಜನವಾಣಿ ಬೇರು ಕವಿವಾಣಿ ಹೂವು" ಎಂಬ ಕನ್ನಡದ ಕಣ್ವ ಬಿ.ಎಂ.ಶ್ರೀ. ಅವರ ನುಡಿಯಂತೆ ಜಗತ್ತಿನ ಸರ್ವ ಸಂಸ್ಕೃತಿಗಳ ತಾಯಿ ಬೇರಾದ ಜಾನಪದ ಲೋಕ ವಿವೇಕವನ್ನು ಕನ್ನಡ ಸಂದರ್ಭದಲ್ಲಿ ಮರುದರ್ಶನ ಮಾಡುವ ಮೂಲಕ ಶಿಷ್ಟ ಮತ್ತು ಕಷ್ಟಕಾಲದ ವಿಚಾರಗಳಿಗೆ ಮಹಾಮುದ್ದಾಗಿ ಮಾಡಿಕೊಳ್ಳಬೇಕೆಂಬ ಆಶಯ ಕಾಲಾನುಕಾಲದಿಂದಲೂ ನೆಲ ಸಂಸ್ಕೃತಿಯನ್ನು ತಮ್ಮ ಅಗಾಧವಾದ ಅನುಭವ, ಅರಿವು ಹಾಗೂ ಕಾರುಣ್ಯಗಳಿಂದ ಕಟ್ಟಿಕೊಂಡು ಬಂದ ಜಾನಪದರು ಬಯಲು ವಿಶ್ವವಿದ್ಯಾಲಯದ ಜೀವಂತ ಜ್ಯೋತಿಗಳು. ಜಾನಪದ ಬದುಕು ಮತ್ತು ಕಲೆಗಳು ಒಂದರೊಳಗೊಂದು ಬೇರೂರಿಕೊಂಡಿರುವ ಕಾರಣದಿಂದಾಗಿ ಜಾನಪದ ಲೋಕಕ್ಕೆ ಮಹೋನ್ನತವಾದ ಪ್ರಾಮಾಣಿಕತೆ ಪ್ರಬುದ್ಧತೆ ಮತ್ತು ಕಲಾತ್ಮಕತೆ ಪ್ರಾಪ್ತವಾಗಿದೆ. ಕನ್ನಡದ ಶಿಷ್ಟ ಪರಂಪರೆಯ ಪೂರ್ವಕಾಲೀನ ಕವಿಯಾದ ಕವಿರಾಜಮಾರ್ಗ ಕಾರನು ಈ ನಾಡಿನ ಜಾನಪದ ಲೋಕದ ಜಾಣ್ಮೆ ಮತ್ತು ಬಲ್ಮೆಯನ್ನು ಕುರಿತು ಹೆಮ್ಮೆಯಿಂದ ದಾಖಲಿಸುತ್ತಾ ಅದವನ್ನರಿತು ನುಡಿಯುವ ನುಡಿದುದ್ದನ್ನು ಅರಿತು ಅರ್ಥೈಸುವ ಈ ನಾಡಿನ ಜನರು ಚತುರತೆಯುಳ್ಳವರು, ನಿಜವಾಗಿಯೂ ಕುರಿತೋದದೆಯು ಕಾವ್ಯ ಪ್ರಯೋಗ ಮಾಡುವ ಪರಿಣತಮತಿಗಳಾಗಿದ್ದರು ಎಂದಿರುವುದು ಅವಿಸ್ಮರಣೀಯ. ಜಾನಪದ ಮತ್ತು ಶಿಷ್ಟಪದಗಳ ನಡುವಿನ ಅನುಸಂಧಾನ ವಿಶಿಷ್ಟವಾದುದು. ಒಮ್ಮೊಮ್ಮೆ ದೂರವಾಗಿ ಮತ್ತೊಮ್ಮೆ ಹತ್ತಿರವಾಗಿ ಮಗದೊಮ್ಮೆ ಜೊತೆಯಾಗಿ ಕೊನೆಗೊಮ್ಮೆ ಒಂದರೊಳಗೊಂದಾಗಿ ಕೆಲವೊಮ್ಮೆ ಎದುರುಬದುರಾಗಿ ಅಸ್ಮಿತೆಯ ಅನನ್ಯತೆಯಲ್ಲಿ ತನ್ನನ್ನು ತಾವು ಬೆಳಗಿಕೊಂಡು ಬಂದಿರುವ ಬಗೆಯು ಚೇತೋಹರಿಯಾದುದು.

Keywords: ಅನುಭವದ ರಸಘಟ್ಟಿ, ಶಿಷ್ಟಸಾಹಿತ್ಯ, ಸೈದ್ಧಾಂತಿಕ ಪರಿಕಲ್ಪನೆ, ತಾಂತ್ರಿಕ ಪಂಥ, ಟೋಟೆಮಿಕ್, ಪಂಚಕಾರ, ಅಭಿಜಾತ, ಭೂತ.

ಜಾನಪದ ಸಾಹಿತ್ಯವು ಭಾವ ಶ್ರೀಮಂತಿಕೆಯ ಜೊತೆಗೆ ಸಂವೇದನಾಶೀಲತೆ ಹಾಗೂ ನೇರವಾದ ಅನುಭವಗಳಿಗೆ ಕಾವ್ಯವಾಗಿರುವುದು ಜನಪದ ಗೀತೆಗಳ ವೈಶಿಷ್ಟ್ಯ. ದಿನನಿತ್ಯದ ಬದುಕಿನ ಅನುಭವವನ್ನು ತಮ್ಮ ಅಪ್ಪಟ ವಿವೇಕ ಮತ್ತು ಜೀವ ಕಾರುಣ್ಯದ ಬಲದಿಂದ ಲೋಕ ಮೀಮಾಂಸೆಯಾಗಿ ಕಟ್ಟಿದವರು. ಜನಪದ ಜನರು ಅನುಭವದ ಪ್ರಾಮಾಣಿಕತೆ ಮತ್ತು ಅಭಿವ್ಯಕ್ತಿಯ ತೀವ್ರತೆಯಿಂದಲೇ ಜನಪದ ಸಾಹಿತ್ಯವು ಅಪ್ಪಟ ಸಾಹಿತ್ಯವಾಗಿದೆ. ಮೇಲ್ನೋಟಕ್ಕೆ ಸರಳವಾಗಿ ಕಾಣುತ್ತಲೇ ಕಿರಿದರಲ್ಲಿ ಪಿರಿದರ್ಥವನ್ನು ಹೇಳುವುದರಲ್ಲಿ ಜನಪದ ಸಾಹಿತ್ಯ ಅಪಾರ ಯಶಸ್ಸನ್ನು ಪಡೆದಿದೆ. ರಾಮಾಯಣ ಮಹಾಭಾರತದಂತಹ ಕಾವ್ಯಗಳು ಜನಪದರಲ್ಲಿ ಬೇರೊಂದೇ ಆಯಾಮವನ್ನು ಪಡೆದು ಬಡವರ ಕಾವ್ಯಗಳಾಗಿ ರೂಪಾಂತರಗೊಂಡಿವೆ. ಐತಿಹಾಸಿಕ ಪ್ರಜ್ಞೆಯ ಕೊರತೆ ಭಾರತೀಯರಲ್ಲಿ ಜನಪದ ಸಾಹಿತ್ಯವು ಅನೇಕ ಸಂದರ್ಭಗಳಲ್ಲಿ ಇತಿಹಾಸದ ಕಾರ್ಯವನ್ನು ನಿರ್ವಹಿಸುವುದು ಜನಭಾಷೆಯ ಶಕ್ತಿ ಮತ್ತು ಸೌಂದರ್ಯಗಳನ್ನು ಸೂರೆಗೊಂಡವರು. ನಮ್ಮ ಜನಪದ ಕವಿಗಳು ಜನಪದರು ಪ್ರಕೃತಿಯೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದವರು ಅವರ ಬದುಕು ಆಲೋಚನೆಗಳು ಕಥೆ ಕವಿತೆಗಳು ಎಲ್ಲವೂ ಪ್ರಕೃತಿಯೊಂದಿಗೆ ಜೀವಕೊರಳ ಸಂಬಂಧವನ್ನು ಹೊಂದಿದವೇ ಆಗಿವೆ. ಮಳೆ ಬರಗಾಲ ಬೆಳೆ ಹೀಗೆ ಅವರ ಬದುಕಿನಲ್ಲಿ ಹಾಸು ಹೊಕ್ಕಗಿರುವ ಪ್ರಕೃತಿಯ ಬಗೆಗೆ ಎಷ್ಟು ಹೇಳಿದರು ಅವರಿಗೆ ಸಾಲದು ಜನಪದರ ಜಾಣತನ ಭಾಷೆ ಬಳಸುವಲ್ಲಿನ ಅವರ ಸೌಂದರ್ಯ ಪ್ರಜ್ಞೆ ಕಥನ ಕಟ್ಟುವ ಕುಶಲತೆ ಈ ಎಲ್ಲವನ್ನು ಜನಪದ ಸಾಹಿತ್ಯದಲ್ಲಿ ನೋಡಬಹುದು.

ಜನಪದ ಬದುಕು ಅನುಭವದ ರಸಘಟ್ಟಿ ಅನುಭವದ ಹಿನ್ನೆಲೆಯಿಂದ ಬಂದ ಜನಪದ ಸಾಹಿತ್ಯವನ್ನು ಒಗ್ಗೂಡಿಸಿಕೊಂಡೆ ನಿರೂಪಿತವಾಗಿರುತ್ತದೆ. ಸಾಹಿತ್ಯದ ಸೃಷ್ಟಿಯೋ ಶ್ರಮ ಸಮೂಹದ ಸೆಲೆಯಿಂದಲೇ ಆಗಿರುತ್ತದೆ. ಬದುಕಿನ ಹಲವಾರು ಘಟನೆ ಸಂದರ್ಭ ಸನ್ನಿವೇಶಗಳು ಸಾಹಿತ್ಯಕ್ಕೆ ಆವರಣವನ್ನು ಒದಗಿಸುತ್ತವೆ. ಕಥೆ, ಒಗಟು, ಗಾದೆ ಹಾಡು ಇವೆಲ್ಲ ಆಯಾ ಸಂದರ್ಭದಲ್ಲಿ ಸೃಜನಗೊಂಡು ಅಜ್ಜ ಅಜ್ಜಿಯರ ಮೂಲಕ ತಲೆ ತಲಾಂತರವಾಗಿ ಸಾಗಿಬಂದಿದೆ. ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಹಾಡಿಕೊಳ್ಳುವ ಜನಪದ ಹಾಡುಗಳೇ ತುಂಬಾ ಜನಪ್ರಿಯವಾಗಿವೆ. ಈ ಹಾಡುಗಳಲ್ಲಿ ಬದುಕಿನ ನವನೀತವೆ ಅಡಗಿದೆ, ಸಕಲ ಜೀವರಾಶಿಯ ಸೃಷ್ಟಿಯೊಳಗೊಂಡ ಅವುಗಳ ಎಲ್ಲಾ ಕ್ರಿಯೆಯನ್ನು ಕರಾತ್ಮಕವಾಗಿ ಸೌಂದರ್ಯವಿತವಾಗಿ ಹಾಡುಗಳಲ್ಲಿ ಹಿಡಿದಿಡಲಾಗಿದೆ ಜೀವನದ ನಡೆ-ನುಡಿ, ಆಚಾರ-ವಿಚಾರ ಧಾರ್ಮಿಕ ರೀತಿ ನೀತಿ ಕೌಟುಂಬಿಕ ನಿಯಮವಾಗಿದೆ.

ಶಿಷ್ಟ ಸಾಹಿತ್ಯ ಅಕ್ಷರಸ್ಥರ ಸೃಷ್ಟಿಯಾದರೆ ಜನಪದ ಸಾಹಿತ್ಯ ಅನಕ್ಷರಸ್ಥರ ಸೃಜನಶೀಲ ಪ್ರತಿಭೆಯ ಅತಿ ಸಹಜವಾದ ಶಕ್ತ ಅಭಿವ್ಯಕ್ತಿ ಆದ್ದರಿಂದ ಶಿಷ್ಟ ಸಾಹಿತ್ಯ ಹುಟ್ಟುವ ಮೊದಲೇ ಆದಿ ಮಾನವರು ತಮ್ಮ ದೈನಂದಿನ ಕಷ್ಟ ಸುಖಗಳನ್ನು ಅನಿಸಿಕೆ ಅನುಭವಗಳನ್ನು ಕನಸು ಕಲ್ಪನೆಯನ್ನು ಕ್ರಿಯೆ ಪ್ರತಿಕ್ರಿಯೆಗಳನ್ನು ಮೌಖಿಕವಾಗಿ ಹಾಡಿನ ಮೂಲಕ ತೋಡಿಕೊಂಡರು. ರಾಜರ ಸಾಹಿತ್ಯ ಹೋಗಿ ಜನಸಾಮಾನ್ಯರ ಸಾಹಿತ್ಯ ರಾಜರ ಹಾಗೂ ವೈದಿಕರ ವೈಭವ ಮರೆಯಾಗಿ ಜನಪದ ವೈಭವವಾಗುತ್ತಿರುವ ಕಾಲದಲ್ಲಿ ಜಾನಪದಕ್ಕೆ ಎಲ್ಲಿಲ್ಲದ ಮಹತ್ವ ಬರತೊಡಗಿತು. ಜಾನಪದದ ಒಂದು ಅಂಗವಾಗಿ ಜನಪದ ಕಲೆಗಳು ಸಹ ಅಧ್ಯಯನಕ್ಕೆ ಅಳವಟ್ಟು ಇತಿಹಾಸದ ಹೊಸ ಹೊಸ ಮುಖಗಳನ್ನು

ಅರಿಯಲು ಸಹಾಯಕವಾದವು. ಜಾನಪದ ಎಂಬುದು ತುಂಬಾ ವಿಶಾಲವಾದ ಅರ್ಥವನ್ನು ಒಳಗೊಂಡಿದೆ. ಜಗತ್ತಿನ ಚರಾಚರವೆಲ್ಲವನ್ನು ಜನಪದ ತನ್ನ ಒಡಲೊಳಗಿರಿಸಿಕೊಂಡಿದೆ. ಮಂತ್ ಕಾಲ ದೇಶಗಳ ಮಿತಿಯಿಲ್ಲದೆಯೇ ಬೆಳೆದು ವಿಶ್ವವ್ಯಾಪಕವಾಗಿದೆ. ಆದ್ದರಿಂದಲೇ ಒಂದು ದೇಶದ ಇತಿಹಾಸವನ್ನು ಅರಿಯುವುದಕ್ಕಿಂತ ಆ ದೇಶದ ಸಂಸ್ಕೃತಿಯನ್ನು ಅರಿಯುವುದು ಹೆಚ್ಚು ಪ್ರಯೋಜನಕಾರಿ. ಜನತೆಯ ಭಾಷೆ-ಬದುಕು ಪದ್ದತಿ-ಪರಂಪರೆ ವಿಧಿ-ವಿಧಾನ ಆದೇಶದ ಸಂಸ್ಕೃತಿಯನ್ನು ರೂಪಿಸುತ್ತದೆ. ಅದಕ್ಕಾಗಿ ನಾವು ಜಾನಪದವನ್ನು ಗೌರವಿಸಬೇಕು ಮತ್ತು ಅಭ್ಯಾಸೀಸಬೇಕು.

ಜಾನಪದ ಸಾಹಿತ್ಯವು ವಿವಿಧ ಪ್ರಕಾರಗಳಲ್ಲಿ ಬೆಳೆದು ಹೆಮ್ಮರವಾಗಿದೆ. ಜನಪದ ಸಾಹಿತ್ಯದ ಪ್ರಕಾರಗಳಲ್ಲಿ ಜನಪದ ಹಾಡು ಬಹುಮುಖ್ಯವಾದ ಪ್ರಕಾರವಾಗಿದೆ. ಕಾವ್ಯ ಜನರನ್ನು ಬಹುಬೇಗ ತಲುಪುವ ಒಂದು ಮಾಧ್ಯಮವು ಕೂಡ ಹೌದು. ಜನಪದ ಹಾಡುಗಳು ನಮ್ಮ ಪೂರ್ವಜರು ಹಾಡಿದ ಹಾಡುಗಳೆಂದು ಅವು ಒಂದು ಪೀಠಿಕೆಯಿಂದ ಮತ್ತೊಂದು ಪೀಳಿಗೆಗೆ ಮೌಖಿಕವಾಗಿ ಹಾಡುತ್ತಾ ಬಂದಿದ್ದಾಗಿದೆ. ಈ ಜನಪದ ಹಾಡುಗಳು ನಮ್ಮ ಪೂರ್ವಜರ ಸಂಸ್ಕೃತಿಯ ಸಂಕೇತವು ಹೌದು. ನಮ್ಮ ಪೂರ್ವಜರ ಬದುಕಿನ ಭಾಗವಾಗಿರುವ ಜಾನಪದ ಹಾಡುಗಳು ಅನೇಕ ವಿಷಯ ವಸ್ತು ಒಳಗೊಂಡಿರುವುದನ್ನು ಕಾಣುತ್ತೇವೆ. ಅದೊಂದು ಜ್ಞಾನದ ಗಣಿಯೂ ಹೌದು. ಇಂದು ಜಾನಪದ ಸಂಗ್ರಹ ಮತ್ತು ಅಧ್ಯಯನದ ಎರಡು ನೆಲೆಗಳು ಪ್ರಶ್ನೆಗಳ ರೂಪದಲ್ಲಿ ಎದುರು ನಿಂತಿವೆ. ಒಂದು ದೇಶಿ ಮೂಲದ ಶಾಸ್ತ್ರ ಶಿಸ್ತಿನ ತಾತ್ವಿಕ ನೆಲೆಗಟ್ಟಿನ ಮೇಲೆ ಈ ಎರಡು ಕಾರ್ಯಗಳು ನಡೆಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ಜಾನಪದ ಸಂಪ್ರದಾಯಗಳಲ್ಲಿ ಲೋಕದೃಷ್ಟಿ ಎಂಬ ವಿಷಯದ ಕುರಿತು ಕೆಲವು ಸೈದ್ಧಾಂತಿಕ ಪರಿಕಲ್ಪನೆಗಳನ್ನು ಕಟ್ಟಿಕೊಳ್ಳಲು ಶಕ್ಯವಿದೆಯೇ ಎಂದು ಮೊದಲು ಕೇಳಿಕೊಳ್ಳಬೇಕಿದೆ. ಜಾನಪದ ಎಂಬ ಪರಿಭಾಷೆಯ ಬದಲಿ ಮಾನವ ಪದ ಶಾಸ್ತ್ರ ಎಂಬುದು ಹೆಚ್ಚು ಸೂಕ್ತವೆಂದು ಈ ಹೆಸರಿನ ಗ್ರಂಥದಲ್ಲಿ ಕಟ್ಟಿಕೊಂಡ ಕೆಲವು ಪರಿಕಲ್ಪನೆಗಳ ಜಾಡನ್ನು ಸಂಪ್ರದಾಯ ಮತ್ತು ಲೋಕದೃಷ್ಟಿಗಳ ಜನ ಗಿರಿವಾಸಿಗಳಾಗಿದ್ದಾಗ ಬೇಟೆ ಮತ್ತು ಪಶು ಪಾಲನೆಯಿಂದ ಜೀವಿಸುತ್ತಿದ್ದರು. ನಮ್ಮ ನಾಡಿನ ಇಂಥ ದ್ರಾವಿಡ ಕುಲಗಳು ಪ್ರಧಾನವಾಗಿ ಕುರುಬರು,ಬೇಡರು,ಗೊಲ್ಲರು, ಗೌಡರು ಪಶು ಪಾಲಕರಾಗಿದ್ದರಿಂದ ವಲಸೆಗರರಾಗಿದ್ದ ಮತ್ತು ಪಿತೃ ಪ್ರಧಾನ ಕುಲ ಪದ್ದತಿಯನ್ನು ಅನುಸರಿಸುತ್ತಿದ್ದ ಈ ಜನಕುಲಗಳು ಬಾಳಿ ಬದುಕಿದ ಕಾಲ ದೇಶ ಸ್ಥಿತಿ ಮತ್ತು ಸಂಸ್ಕೃತಿ ಪರಂಪರೆ ಅವರ ಸಂಪ್ರದಾಯಗಳನ್ನು ಕಟ್ಟಿಕೊಟ್ಟವು ಅವರ ಲೋಕದೃಷ್ಟಿ ಪ್ರಕಟಗೊಳ್ಳಲು ಈ ಹಿನ್ನೆಲೆಯೇ ಮುಖ್ಯಧಾರವಾಗಿತ್ತು ಬೇರೆ ರೀತಿಯಿಂದ ಹೇಳುವುದಾದರೆ ಒಲಸೆಗಾರಿಕೆ ಸಾಕುಪ್ರಾಣಿಗಳ ಜೊತೆಯ ಸಂಬಂಧ ಇವರ ಸಂಪ್ರದಾಯ, ರೂಢಿ, ಪದ್ದತಿ, ಆಚರಣೆ ಮತ್ತು ಮೌಖಿಕ ಪರಂಪರೆಗಳನ್ನು ರೂಪಿಸಿದ ಪ್ರಧಾನ ಭೌತಿಕಾಂಶಗಳಾಗಿದ್ದವು. ದೊಡ್ಡ ಸಂಖ್ಯೆಯ ಕುರಿ, ಆಡು, ಎಮ್ಮೆ, ಕೋಣ, ಹೋರಿ ಆಕಳನ್ನು ಸಾಕಿಕೊಳ್ಳಲು ಬೇಕಾದ ಕುರುಚಲು ಕಾಡುನೀರಿನ ಆಶ್ರಯಗಳು ಕರ್ನಾಟಕದ ವಿಸ್ತಾರವಾದ ಬಯಲು ಸೀಮೆಯ ಗುಡ್ಡಗಾಡುಗಳಲ್ಲಿತ್ತು. ಈ ಭೌಗೋಳಿಕ ಪ್ರದೇಶಗಳಲ್ಲೇ ಈ ಪಶುಪಾಲಕ ಸಂಸ್ಕೃತಿಯ ಹಟ್ಟಿ, ಕೊಪ್ಪ, ಕೊಪ್ಪಲ,ರೊಪ್ಪ,ಪಾಡಿ ಪಟ್ಟಿ ಕಾವಲ್ ಮುಂತಾದ ಅಂತ್ಯ ಪದಗಳಿಂದ ಕೂಡಿದ್ದ ಊರುಗಳ ಹೆಸರುಗಳು ಹೆಚ್ಚಿವೆ. ಬೇಟೆಗಾರಿಕೆಯಿಂದ ನೇರವಾಗಿ ಕೃಷಿಗೆಳಿದ ಮೂಲ ನೆಲೆಸುಗಾರರು ಮಾತ್ರ

ಆಧಾರಕರಾಗಿದ್ದ ಹೊಲೆಯ ಮತ್ತು ಮಾದಿಗ ಕುಲಗಳು ಹಳ್ಳ ಮತ್ತು ನದಿಗಳ ಪಕ್ಕದ ಹಳ್ಳಿ ಊರುಗಳಲ್ಲಿದ್ದರು. ಇವು ಸ್ಥಿರವಾಗಿ ನೆಲೆಸಿದ ಮೊದಲ ಕೃಷಿಕರ ಗ್ರಾಮಗಳು ಇಲ್ಲಿಯ ಭೌಗೋಳಿಕ ಸ್ಥಿತಿ ಉತ್ಪಾದನಾ ಸಂಬಂಧದ ಉತ್ಪಾದನೆಯ ತಾಂತ್ರಿಕತೆಯ ಮಟ್ಟ ಈ ಜನಕುಲಗಳ ಸಂಪ್ರದಾಯ ಮತ್ತು ಲೋಕದೃಷ್ಟಿಯನ್ನು ನಿರ್ಧರಿಸಿದವು. ಈ ಜನಕುಲಗಳೇ ತಾಂತ್ರಿಕ ಪಂಥ ಯೋಗ ನ್ಯಾಯ ವೈಶೇಷಿಕ ವೈದ್ಯ ಕಲೆಗಳು ಮೊದಲಾದವುಗಳು ಸೃಷ್ಟಿಗೆ ಹೇಗೆ ಕಾರಣವಾದವೆಂಬುದನ್ನು ಜಾತ್ರೆಗಳು ಮತ್ತು ಹಬ್ಬಗಳು ಈ ಕೃಷಿಕರ ಸಂಸ್ಕೃತಿಗೆ ಸೇರಿದ್ದವು ಜಾತ್ರೆಗಳು ವಲಸೆಗಾರ ಕುಲ ಸಂಸ್ಕೃತಿಗೆ ಸೇರಿದ್ದವು.

ಕನ್ನಡ ದ್ರಾವಿಡ ಸಂಸ್ಕೃತಿಯ ಮೂಲ ನೆಲೆಗಟ್ಟು ನೆಲೆಸುಗಾರ ಕೃಷಿಕರು ಮತ್ತು ಒಲಸೆಗಾರ ಪಶು ಪಾಲಕರು ಎಂದು ಪ್ರತ್ಯೇಕವಾಗಿ ಉಳಿದಿದ್ದರೂ ಕೂಡ ಹೆಚ್ಚು ಮಟ್ಟಿಗೆ ಸಮನ್ವಯಗೊಂಡ ಆರ್ಯವೈದಿಕ ಮತ್ತು ಅವೈದಿಕ ಜನರ ದಾಳಿಯ ನಂತರ ವರ್ಗ ಜಾತಿ ವ್ಯವಸ್ಥೆ ಸ್ಥಾಪಿತವಾಗಿ ನಮ್ಮ ಸಂಸ್ಕೃತಿಯ ಆಕರಗಳು ಹೊಸರೂಪದಾರಣ ಮಾಡಿದವು. ಅಂದರೆ ನಮ್ಮ ಸಮಾಜ ತನ್ನದೇ ಆದ ಆಂತರಿಕ ಕಾರಣಗಳಿಂದಾಗಿ ಅಲ್ಲ ಬಾಹ್ಯ ಒತ್ತಡಗಳಿಂದ ಚಾರಿತ್ರಿಕ ಚಲನೆಗೆ ಒಳಗಾಯಿತು. ಇದರಿಂದ ದೇಶಿಯತೆ ಹೊರಗಿನಿಂದ ಬಂದ ಪ್ರಭಾವಗಳನ್ನು ಅನುಮಾನಿಸಿ ವಿರೋಧಿಸುತ್ತದೆ, ತನ್ನ ಅನನ್ಯತೆಯನ್ನು ಹಠದಿಂದ ಉಳಿಸಿಕೊಳ್ಳಲು ಹೆಣಗುತ್ತದೆ ಈ ಸಂಘರ್ಷದ ನೆಲೆಯೇ ನಮ್ಮ ಸಂಸ್ಕೃತಿಯ ಸ್ವಭಾವವನ್ನು ರೂಪಿಸುತ್ತದೆ. ದ್ರಾವಿಡರ ಮೈಲಾರ ಮತ್ತು ರಂಗರು ವೈದ್ಯಕೀಕೃತಗೊಂಡು ಶಿವ ವಿಷ್ಣುಗಳಾಗುತ್ತಾರೆ. ಟೊಟೆಮಿಕ್ ಹನುಮಂತ ಮುಖ್ಯ ಪ್ರಾಣನಾಗುತ್ತಾನೆ. ದುರ್ಗವ್ವ ದುರ್ಗೆಯಾಗುತ್ತಾಳೆ ಮುಂದಿನ ವಿವಿಧ ಕಾಲಘಟ್ಟಗಳ ರಾಜಕೀಯ ಆರ್ಥಿಕ ಒಳಸಂಘರ್ಷಗಳಿಗೆ ನಮ್ಮ ಜನಕುಲಗಳು ತಮ್ಮನ್ನು ಅನಿವಾರ್ಯವಾಗಿ ಒಡ್ಡಿಕೊಳ್ಳುತ್ತಾ ಬರಬೇಕಾಯಿತು. ಚರಿತ್ರೆಯ ಈ ಗತಿಶೀಲತೆಯ ಮದ್ಯೆಯೇ ನಮ್ಮ ಯಾವುದೇ ಬಗೆಯ ಪ್ರಶ್ನೆಗಳಿಗೆ ಉತ್ತರ ಹುಡುಕಿಕೊಳ್ಳಬೇಕಾಗುತ್ತದೆ. ಕೃಷಿಕ ಮೂಲಕ ನೆಲೆಸುಗಾರರು ಗ್ರಾಮೀಣ ಪಶುಪಾಲಕ ವಲಸೆಗಾರರು ಆರ್ಯ,ವೈದಿಕ,ವೈದಿಕರು, ಮುಸ್ಲೀಮರು, ವಸಹತುಶಾಹಿಗಳು, ನವವಸಾಹತುಶಾಹಿಗಳು ಹೀಗೆ ಕಾಲಾನುಕ್ರಮ ಕರ್ನಾಟಕದಲ್ಲಿ ಈ ಬಗೆಯ ಆಕೃತಿಗಳ ನಡುವೆ ಸಂಘರ್ಷ ಮತ್ತು ಸಮನ್ವಯಗಳು ಕೋಳುಕೊಡೆಗಳು ನಡೆದು ಬಂದವು. ಅಂದರೆ ಸಂಕೀರ್ಣವಾಗಿ ಬೆಳೆದು ನಿಂತಿರುವ ಇಂದಿನ ನಮ್ಮ ಜನ ಕುಲಗಳ ನಡುವೆ ಅಧ್ಯಯನ ಮಾಡುವಾಗ ಎದುರಾಗುವ ಕಷ್ಟಗಳನ್ನು ತಿಳಿಸಿರಬೇಕೆಂದೇ ಈ ಮಾತುಗಳ ಅರ್ಥ ಜಾನಪದದಲ್ಲಿ ಲೋಕದ ದೃಷ್ಟಿಯ ಕುರಿತು ಮೊಟ್ಟ ಮೊದಲು ಕನ್ನಡದಲ್ಲಿ ಬರೆದ ಡಾ. ಬಿಳಿಮಲೆಯವರು ಲೋಕದೃಷ್ಟಿ ಸಂಸ್ಕೃತಿಯೊಂದರ ಕೇಂದ್ರೀಯ ನಿಯಂತ್ರಕ ಶಕ್ತಿ ಎಂದೂ ಅದು ಅಪ್ರಜ್ಞಾಪೂರ್ವಕವಾಗಿ ಜನರಿಗೆ ಮಾರ್ಗದರ್ಶಿಸುತ್ತದೆ ಎಂದು ಹೇಳುತ್ತಾರೆ. ಕರಾವಳಿ ಜಾನಪದ ವರ್ಡ್ ಔಟ್ಲೂಕ್ ಎಂಬ ಇಂಗ್ಲಿಷ್ ಮಾತಿಗೆ ಸಂವಾದಿಯಾದ ಪದ ಲೋಕದೃಷ್ಟಿ ಇದು ತತ್ವಜ್ಞಾನದಲ್ಲಿ ಪ್ರಮುಖವಾಗಿರುವ ಪರುಭಾಷೆ ತತ್ವಜ್ಞಾನಿಯ ದೃಷ್ಟಿಕೋನ ಎಂದೂ ಕೂಡ ಇದನ್ನು ಕರೆಯಬಹುದು ಇದನ್ನು ಆಧರಿಸಿಕೊಂಡು ದೈನಂದಿನ ಬದುಕಿನಲ್ಲಿ ಅಳವಟ್ಟಿರುವ ಸಾಮೂಹಿಕ ಕ್ರಿಯೆಗಳು ಆಚರಣೆಗಳು ಸಂಪ್ರದಾಯ ರೂಪದಲ್ಲಿರುತ್ತವೆ.

ಜನಪದದಲ್ಲಿ ಶೋಷಕ ವರ್ಗದ ಸೈದಾಂತಿಕ ಅಸ್ತ್ರವಾದ ಧರ್ಮದಲ್ಲಿ ಲೋಕದೃಷ್ಟಿ ಆಧ್ಯಾತ್ಮಿಕವು ಪಾರಲೌಕಿಕವೂ ವೈಭವೋಪೇತ ಕಲ್ಪನೆಯದ್ದು ಆಗಿರಬಲ್ಲದು ಅಲ್ಲಿ ಕರ್ಮ ಪುನರ್ಜನ್ಮ ಪಾಪ ಪುಣ್ಯ ಪರಲೋಕ ಮೋಕ್ಷ ಪರಮಾತ್ಮ ಮುಂತಾದ ವಿಪುಲ ಪರಿಭಾಷೆಯ ಪ್ರಪಂಚವೇ ಇರುತ್ತದೆ. ನಿರ್ದಿಷ್ಟ ಕ್ರಿಯೆ ಮತ್ತು ಆಚರಣೆಗಳ ಕಾಲಬದ್ಧ ಪರಿಷ್ಕಾರವನ್ನು ಒಳಗೊಂಡ ಪುನರಾವರ್ತನೆಯ ಪ್ರಕ್ರಿಯೆಯನ್ನು ಸಂಪ್ರದಾಯವೆಂದು ಹೇಳುತ್ತೇವೆ. ಈ ಪಾರಿಭಾಷೆಯ ಜೊತೆ ಪರಂಪರೆಯನ್ನು ಎದುರಿಟ್ಟು ನೋಡುವ ದೃಷ್ಟಿ ಈಚೆಗೆ ಬೆಳೆದು ಬಂದಿದೆ. ಪ್ರಗತಿಪರ ಚಿಂತಕರಂತೂ ಸಾಂಪ್ರದಾಯವೆಂಬ ಪದವನ್ನು ತಿರಸ್ಕರಿಸಿ ಪರಂಪರೆಯನ್ನು ಬಳಸುತ್ತಿದ್ದಾರೆ ಈ ಬಗೆಯ ಸಾಂಸ್ಕೃತಿಕ ದಾಳಿಯಿಂದ ಸಂಪ್ರದಾಯವೆಂಬ ಪದವೇ ಬಳಕೆಗೆ ಯೋಗ್ಯವಲ್ಲ ಎಂದೊ ಅಥವಾ ಮೂಡನಂಬಿಕೆ, ಕಂದಾಚಾರ, ಅವೈಜ್ಞಾನಿಕತೆಗಳನ್ನು ಸೂಚಿಸುವ ಪದವೆಂದೊ ಭಾವಿಸಲಾಗುತ್ತದೆ. ಸಾಂಸ್ಕೃತಿಕ ಸಂದರ್ಭದಲ್ಲಿ ಇಂತಹ ಪಲ್ಲಟಗಳು ಮತ್ತು ವಿಪರೀತ ಕ್ರಮಗಳು ಇಂದಿನಿಂದಲೂ ನಡೆದು ಬಂದಿದೆ. ಶಿಷ್ಟ ಪರಿಶಿಷ್ಟ ಅಥವಾ ಶಿಷ್ಟ ಜಾನಪದ ಎಂಬ ತಪ್ಪು ಕಲ್ಪನೆಗಳು ಇಂಥದಕ್ಕೆ ಇನ್ನೊಂದು ಉದಾಹರಣೆ. ಅಭಿಜಾತ ಎಂಬರ್ಥದಲ್ಲಿ ಯಜಮಾನ ಶಿಷ್ಟ ಮತ್ತು ಜಾನಪದ ಎಂಬುದನ್ನು ಮಾನವಪದಶಿಷ್ಟ ಎಂದು ಬಳಸುವುದು ಹೆಚ್ಚು ಸೂಕ್ತವೆನಿಸುತ್ತದೆ. ಸದ್ಯಕ್ಕೆ ಈ ಚರ್ಚೆ ಇಲ್ಲಿ ಸಾಕು ಎನಿಸುತ್ತದೆ. ರೂಢಿ ಪದ್ಧತಿ ಆಚರಣೆ ಮೌಖಿಕ ಪರಂಪರೆ ಮೊದಲಾದ ಪಟ್ಟಂದವನ್ನು ಸಂಸ್ಕೃತಿ ಸಂಪ್ರದಾಯದಲ್ಲಿ ಸೇರಿಕೊಂಡು ಜನ ಕುಲಗಳ ಮೌಖಿಕ ಮತ್ತು ಕ್ರಿಯಾತ್ಮಕ ಪುನರಾವರ್ತನೆಯ ಪ್ರಕ್ರಿಯೆಯಲ್ಲಿ ಲೋಕದೃಷ್ಟಿಯ ಸ್ವರೂಪವನ್ನು ನಿರ್ಧರಿಸಬೇಕಿದೆ.

ಜಾನಪದ ಲೋಕ ಮತ್ತು ಕನ್ನಡ ಸಂಸ್ಕೃತಿ ಜಾನಪದ ಸಂಪ್ರದಾಯಗಳಲ್ಲಿ ಲೋಕದೃಷ್ಟಿ ಎಂಬ ವಿಷಯದ ಅನ್ವೇಷಣೆಗೆ ನಾವು ಮುಖ್ಯವಾಗಿ ಮಾಡಬೇಕಾಗಿರುವ ಕೆಲಸವೆಂದರೆ ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ದ್ರಾವಿಡ ಜನಕುಲಗಳ ಜನಾಂಗೀಯ ಅಧ್ಯಯನ ಈ ಬಗೆಯ ತೌಲನಿಕ ಅಧ್ಯಯನದಿಂದ ಕನ್ನಡ ಜನಪದ ಕುಲಗಳ ಒಂದು ನಿರ್ದಿಷ್ಟ ಚಿತ್ರವನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಕನ್ನಡ ಜನಕೂಲಗಳ ಗುಣ ಸ್ವಭಾವ ಸಂಸ್ಕೃತಿ , ಪರಂಪರೆ ದ್ರಾವಿಡ ಜನಕುಲಗಳ ಸಂಸ್ಕೃತಿಯ ಒಂದು ಪ್ರಧಾನ ಧಾರೆಯಾಗಿರುವುದನ್ನು ಕಾಣುತ್ತೇವೆ. ಉದಾ: ಕನ್ನಡ ನಾಡಿನ ಮೂಲ ಕೃಷಿಕರಾದ ಹೊಲೆಯ ಮಾದಿಗ ಆಂಧ್ರದ ಮಾಲ ಮಾದಿಗ ತಮಿಳುನಾಡಿನ ಪಾರೈಯನ್ ಪಲ್ಲನ್ ಚಕ್ಕಲಿಯನ್, ಕೇರಳದ ಚೆರುಮನ್ ಇವರೆಲ್ಲರ ಸಂಸ್ಕೃತಿಗಳ ನಡುವೆ ಗಾಢವಾದ ಸಂಬಂಧವಿದೆ ಹೀಗಾಗಿ ಕನ್ನಡದ ವಲಯ ಮಾದಿಗರ ಸಂಪ್ರದಾಯಗಳ ಲೋಕದೃಷ್ಟಿಯ ಶೋಧನೆ ಎಲ್ಲಾ ದ್ರಾವಿಡ ರಾಜ್ಯಗಳಲ್ಲಿರುವ ವಲಯ ಮಾದಿಗರ ಲೋಕದೃಷ್ಟಿಯ ಶೋಧನೆಯನ್ನು ಆಧರಿಸುತ್ತದೆ. ಈ ಮಾತು ಪಶುಪಾಲಕ ಜನವರ್ಗಗಳಿಗೂ ಅನ್ವಯಿಸುತ್ತದೆ. ಕರಕುಶಲ ಕರ್ಮಿ ವರ್ಗಗಳು ಕೃಷಿಕ ಸಮಾಜದ ಉತ್ಪನ್ನಗಳು ದಕ್ಷಿಣ ಭಾರತದ ಎಲ್ಲಾ ದ್ರಾವಿಡ ರಾಜ್ಯಗಳ ಕ್ಷೌರಿಕ ಮತ್ತು ಅಗಸರ ಸಂಪ್ರದಾಯಗಳನ್ನು ಪರಸ್ಪರ ಹೋಲಿಸಿ ನೋಡಿದರೆ ಅವರು ನಾನಾ ನಮೂನೆಯ ಅಮ್ಮನ ಪೂಜಾರಿಗಳಾಗಿದ್ದುದು ತಿಳಿದು ಬರುತ್ತದೆ. ಬಟ್ಟೆ ಮಡಿ ಮಾಡುವ ಮತ್ತು ದೇಹದ ಕೂದಲು ಉಗುರು ತೆಗೆಯುವ ಮೂಲಕ ಜನರನ್ನು ಪವಿತ್ರಿಕರಿಸುವ ಇವರು ದೇವರುಗಳ ಪೂಜಾರಿಗಳಾಗಿದ್ದುದು ಸಹಜವೇ ಇದೆ. ಇವರೂ ಕೂಡ ಕೃಷಿಕ ಸಮಾಜದ ಉತ್ಪನ್ನಗಳೇ

ಆರ್ಯ ವೈದಿಕರ ದೇವರು ದೇವ ಎಂಬ ಆಧ್ಯಾತ್ಮವಾಗಿ ಪರಿಕಲ್ಪನೆ ದ್ರಾವಿಡರಲಿಲ್ಲ. ಇಲ್ಲಿ ಅಮ್ಮ ಅಪ್ಪಂದಿರ ಮಟ್ಟದ ಭೌತಿಕ ತತ್ವಜ್ಞಾನ ಬೆಳೆದಿದೆ ಸಾಂಖ್ಯ ತತ್ವದಲ್ಲಿ ಇದುವೇ ಪ್ರಕೃತಿ ಪುರುಷ ಎಂದು ಪರಿಷ್ಕೃತಗೊಂಡಿದೆ. ಆತ್ಮ ಪರಮಾತ್ಮ ಮೋಕ್ಷ ಪಾಪ ಪುಣ್ಯ ಕರ್ಮ ಪುನರ್ಜನ್ಮ ಪರಿಭಾಷೆಯ ದಟ್ಟ ಪ್ರಭಾವದಿಂದಾಗಿ ನಾವು ನಮ್ಮತನವನ್ನು ಕಳೆದುಕೊಂಡು ನಮ್ಮ ಸಂಸ್ಕೃತಿ ಪರಂಪರೆ ಮತ್ತು ತತ್ವಜ್ಞಾನಿಯ ಪರಂಪರೆಯನ್ನು ತಿಳಿಯದೆ ಕಂಗಾಲಾಗಿದ್ದೇವೆ ಇದಕ್ಕೆ ಲಿಖಿತ ಪರಂಪರೆಯ ಮೇಲಿನ ನಮ್ಮ ಅವಲಂಬನೆ ಮತ್ತು ಅತಿಯಾದ ವ್ಯಮೋಹಗಳು ಕಾರಣವಾಗಿವೆ. ಕೃಷಿ ಮೂಲದ ದ್ರಾವಿಡ ಕುಲಗಳ ಅಮ್ಮಂದಿರ ಬಗೆಗಿನ ನಂಬಿಕೆ ಮತ್ತು ಆಚರಣೆಗಳಲ್ಲಿ ಪ್ರಕಟವಾಗಿರುವ ಲೋಕದೃಷ್ಟಿ , ಕೃಷಿ ಮತ್ತು ಮಾನವ ಸಮೃದ್ಧಿಯ ಆಶಯಗಳಿಂದ ತುಂಬಿ ನಿಂತಿವೆ. ಇಡೀ ಬದುಕಿನ ಪ್ರತಿಯೊಂದು ವಿವರಗಳನ್ನು ವಸ್ತುಗಳನ್ನು ಆಗುಹೋಗುಗಳನ್ನು ಅಮ್ಮನ ಪರಿಕಲ್ಪನೆಯ ಮೂಲಕವೇ ಗ್ರಹಿಸಲು ಯತ್ನಿಸಲಾಗಿದೆ. ಧರ್ಮದ ಮಟ್ಟಕ್ಕೆ ವಿರಾಮ ವೇಳೆಯ ತಾತ್ವಿಕ ಚರ್ಚೆಯ ಮಟ್ಟಕ್ಕೆ ಬೆಳೆಯದ ನಮ್ಮ ಲೋಕದೃಷ್ಟಿ ಆಚರಣೆ, ನಂಬಿಕೆ, ಪದ್ಧತಿ, ರೂಢಿಗಳ ಮಟ್ಟಕ್ಕೆ ಉಳಿದಿದೆ. ಇದು ದುಡಿಯುವ ಜನ ವರ್ಗಗಳ ಬದುಕಿನ ಸ್ವಭಾವಕ್ಕೆ ಅನುಗುಣವಾಗಿಯೇ ಇದೆ. ಇಲ್ಲಿ ಜಗತ್ತಿನ ಹುಟ್ಟಿಗೆ ಸ್ತ್ರೀಶಕ್ತಿಯೇ ಕಾರಣವೆಂದು ಗ್ರಹಿಸಲಾಗುತ್ತದೆ.

ಭಾರತದಲ್ಲಿ ಕೃಷಿಯನ್ನು ಶೋಧನೆ ಮಾಡಿದ ಮೊದಲಿಗರು ಹೊಲೆಯ, ಮಾದಿಗ ಮಹಿಳೆಯರು ಭೂಮಿಯಿಂದ ಕಾಡು ಪಡೆಯುವುದನ್ನು ಕಾಳಿನಿಂದ ಅನ್ನವನ್ನು ಹೇಗೆ ಮಾಡಬೇಕೆಂಬುದನ್ನು ಕಲಿತು ಕಲಿಸಿದವರು. ಈ ಮಹಿಳೆಯರು ಮಾನವ ಜೀವನದ ಅತ್ಯಂತ ಕ್ರಾಂತಿಕಾರಕವಾದ ಈ ಕ್ರಮವನ್ನೇ ಸಂಪ್ರದಾಯಗಳಲ್ಲಿ ಅಂತಿಮ ಆಶಯ ಮತ್ತು ಕೇಂದ್ರ ವಿಷಯವನ್ನಾಗಿ ಸ್ವೀಕರಿಸಲಾಗಿದೆ. ಅಂದರೆ ಅನ್ನಂ ಬ್ರಹ್ಮಾತ್ ಎಂಬ ಅನ್ಯರ ಲೋಕದೃಷ್ಟಿಯನ್ನು ಹೋಲುವ ಪ್ರಾಯೋಗಿಕ ಸ್ಥಿತಿ ನಮ್ಮ ಜನಪದದಲ್ಲಿ ಉಳಿದಿದೆ. ಒಂದರ್ಥದಲ್ಲಿ ಬದುಕಿನ ಭೌತಿಕ ಕ್ರಮಗಳೇ ದ್ರಾವಿಡ ಸಂಪ್ರದಾಯಗಳಲ್ಲಿ ವಿಧಿಯಾಚರಣೆಗಳಾಗಿ ಪುನರುಕ್ತವಾಗುತ್ತವೆ. ಹಾಗಾಗಿ ದ್ರಾವಿಡ ಸಂಪ್ರದಾಯಗಳ ಲೋಕದೃಷ್ಟಿ ಭೌತಿಕ ಸುಖ-ಸಮೃದ್ಧಿ ಭೌತಿಕ ಜೀವನ ಪದ್ಧತಿ ಭೌತಿಕ ಸ್ಥಿತಿ-ಗತಿ, ಭೌತಿಕ ಆಗು-ಹೋಗುಗಳಿಂದ ಹೊರತಾಗಿ ರೂಪುಗೊಂಡದ್ದಲ್ಲ. ಕಾಡುಗೊಲ್ಲ ಮ್ಯಾಸ ನಾಯಕ, ಕುರುಬ ಮೊದಲಾದ ಪುರುಷ ಪ್ರಧಾನ ಪಶು ಪಾಲಕರಲ್ಲಿ ಋತುಮತಿಯಾದ ಹುಡುಗಿಯನ್ನು ಅಥವಾ ಬಾಣಂತಿಯನ್ನು ಪ್ರತ್ಯೇಕವಾಗಿಟ್ಟು ವಿವಿಧ ಬಗೆಯ ಸೂತಕಾಚರಣೆಗಳ ಮೂಲಕ ಹಟ್ಟಿಹೊಳಗೆ ಸೇರಿಸಿಕೊಳ್ಳುವ ಕ್ರಮವಿದ್ದರೆ ಮಾತ್ರ ಪ್ರಧಾನ ಕೃಷಿಕ ಸಮಾಜಗಳಾದ ವಲಯ ಮಾದಿಗರಲ್ಲಿ ಈ ಸಂದರ್ಭಗಳನ್ನು ಸೂತಕದಂತೆ ಅಲ್ಲ ಇದನ್ನು ಸಂಭ್ರಮದಿಂದ ವಿವಿಧ ಬಗೆಯ ಸಮೃದ್ಧ ಸೂಚಕ ಆಚರಣೆಗಳಿಂದ ಪೂರೈಸುತ್ತಾರೆ. ಕೃಷಿಕ ಮತ್ತು ಪಶುಪಾಲಕ ಜನ ವರ್ಗಗಳ ಸಾಂಸ್ಕೃತಿಕ ಭಿನ್ನತೆಯನ್ನು ಸೂಚಿಸುವ ಉದಾಹರಣೆಯಾಗಿದೆ. ಈ ಬಗ್ಗೆ ಲೋಕದೃಷ್ಟಿಗೆ ಹಲವಾರು ಪರಿಮಿತಿಗಳಿವೆ. ಎಂಬುದನ್ನು ಒಪ್ಪಲೇಬೇಕು ಇಂಥ ಪರಿಮಿತಿಗಳಿಗೆ ಕಾಲ ದೇಶ ಸ್ಥಿತಿಗಳು ಸಾಮಾಜಿಕ ಬೆಳವಣಿಗೆಯ ಮಟ್ಟ ಕಾರಣವಾಗಿರುತ್ತದೆ. ತಾಂತ್ರಿಕತೆ ಮತ್ತು ವೈಜ್ಞಾನಿಕ ಬೆಳವಣಿಗೆ ಕೆಳಮಟ್ಟದಲ್ಲಿದ್ದಾಗ ಈ ಪರಿಮಿತಿ ಅನಿವಾರ್ಯವೇ ಆದರೆ ಶೋಷಕ ವರ್ಗಗಳು ಮತ್ತು ಆಳುವ ವರ್ಗಗಳು ಹುಟ್ಟಿಸಿದ ಮೋಸದ ಲೋಕದೃಷ್ಟಿಗಳಂತೆ ಜನಪದ ತಾತ್ವಿಕ

ಕಣ್ಕೋಟಗಳು ಅಪಾಯಕಾರಿಗಳಾಗಿರಲಿಲ್ಲ. ತಮ್ಮದೇ ಆದ ರೀತಿಯಲ್ಲಿ ಅವು ಆಳುವ ವರ್ಗಗಳ ಯಜಮಾನಿಕೆಯನ್ನು ಪ್ರತಿಭಟಿಸುತ್ತಲೇ ಬಂದವು ಕನ್ನಡ ದ್ರಾವಿಡ ಕೃಷಿಕ ಸಂಸ್ಕೃತಿಯ ಮೂಲಕ ರೂಪಗಳು, ಭೌಗೋಳಿಕ ಸ್ವರೂಪದಿಂದಾಗಿ ತುಳುನಾಡಿನಲ್ಲಿ ಭೂತರಾದನೆಯಲ್ಲಿ ಗಟ್ಟಿಯಾಗುಳಿದಿವೆ. ಕಾಲಕಾಲಕ್ಕೆ ಅದರಲ್ಲಿ ಎಷ್ಟೋ ಬದಲಾವಣೆ ಮತ್ತು ಸೇರ್ಪಡೆಗಳಾದರು ತನ್ನ ಪ್ರಾಚ್ಯರೂಪವನ್ನು ಅದು ಕಳೆದುಕೊಂಡಿಲ್ಲ ಪಾಶ್ಚ್ಯಾತ್ಯ ವಿದ್ವಾಂಸರು ತಮ್ಮ ಕಲ್ಪನೆಯಿಂದ 'ಭೂತ' ಎಂಬ ಪದ ಬಳಕೆಗೆ ಬಂದಿತು ಎನ್ನುವ ಸುಳುನಾಡ ವಿದ್ವಾಂಸರೆ ದೈವ ತೇಯ್ಯಾ ಪದಗಳ ಬಳಕೆ ಸರಿ ಎನ್ನುತ್ತಾರೆ. ಆದರೆ ಅವು ಕೂಡ ವೈದಿಕ ಬ್ರಾಹ್ಮಣರು ತುಳುನಾಡನ್ನು ಪ್ರವೇಶಿಸಿದಾಗ ಹುಟ್ಟಿದ ಸಂಸ್ಕೃತ ಪದಗಳು ಹಾಗಾಗಿ ಅಮ್ಮ ಪದವೇ ಅಲ್ಲಿಯೂ ಮೂಲದ್ದು ವೇಷ ಕಟ್ಟಿ ವಾದ್ಯಗಳೊಡನೆ ವರ್ಷದಲ್ಲಿ ಒಮ್ಮೆ ಅಥವಾ ಕೆಲಸದ ಮಾಡುವ ಉತ್ಸಾಹ ತೆಯ್ಯಾಟಂ ಅಥವಾ ಭೂತಾರಾಧನೆ ನೆಲ್ಕೆ, ಪಂಬದ, ಪರವ, ಹೊಲೆಯ, ಮಾದಿಗರು ವೇಷ ಕಟ್ಟಿ ಬೂತಗಳಾಗಿ ಬ್ರಾಹ್ಮಣರನ್ನೂ ಕೂಡ ಹೆದರಿಸಿಕೊಂಡು ಮಾಡುವ ಆಟವೇ ಅಂದರೆ ಲೀಲೆಯೇ ಆಗಿದೆ. ಯಕ್ಷಗಾನ ಈ ಭೂತ ವೇಷ ಮತ್ತು ಆಟಗಳಿಂದಲೇ ಹುಟ್ಟಿದ್ದು ಅಮ್ಮನ ವೇಷ ಕಟ್ಟಿ ವಿಧಿ ಬದ್ಧವಾಗಿ ಮಾಡುವ ಆಟ ದ್ರಾವಿಡ ಲೋಕದೃಷ್ಟಿಯ ಅದ್ಭುತ ಪಳಯುಳಿಕೆಯಾಗಿದೆ. ಕೃಷಿಗೆ ಸಂಬಂಧಿಸಿದ ಪಂಬದ ಪರವ ನಲ್ಕೆ ಕೊರಗ ಮೂಲ ಮುಂತಾದಲಿತರ ಈ ಬಗೆ ಆಚರಣೆಗಳು ಕುತೂಹಲಕಾರಿಯಾಗಿದೆ. ಇವರ ಹುಟ್ಟು ಮದುವೆ ಸಾವುಗಳಿಗೆ ಸಂಬಂಧಿಸಿದ ಸಂಪ್ರದಾಯಗಳಲ್ಲಿ ಒಂದು ನಿರ್ದಿಷ್ಟ ಕ್ರಮ ಮತ್ತು ಆಂತರಿಕ ಸಂಬಂಧವಿರುವುದಕ್ಕೂ ಲೋಕದ ಬದುಕನ್ನು ಗ್ರಹಿಸಿದ ಅವರ ವಿಧಾನಕ್ಕೂ ನಿಕಟ ಸಂಬಂಧವಿದೆ. ಮಾತ್ರ ಪ್ರಧಾನ ಕೃಷಿ ಬುಡಕಟ್ಟುಗಳಲ್ಲಿ ತಂದೆಗೆ ಮತ್ತು ಖಾಸಗಿ ಒಡೆತನಗಳಿಗೆ ಅವಕಾಶವಿರಲಿಲ್ಲ ಅಂತೆಯೇ ಈ ಜನಾಂಗಗಳಲ್ಲಿ ಮತ್ತು ಸಂಪ್ರದಾಯಗಳಲ್ಲಿ ಗಂಡು ಹೆಣ್ಣಿನ ಸಮಾನತೆ ಸ್ತ್ರೀ ಪ್ರಾಬಲ್ಯ ಕೊಡುಣ್ಣುವ ಬುಡಕಟ್ಟು ಲಕ್ಷಣಗಳು ಕಂಡುಬರುತ್ತವೆ. ಆದರೆ ಇದು ವರ್ಣ ಜಾತಿ ಸಮಾಜದ ಹುಟ್ಟಿನೊಂದಿಗೆ ತೀವ್ರತರ ಬಾಧೆಗೆ ಒಳಗಾಯಿತು. ವರ್ಣ ಜಾತಿ ಶೋಷಣೆ ಶ್ರೇಣಿಕೃತ ಸಮಾಜದ ಅಡಿಪಾಯವಾಯಿತು. ಬುಡಕಟ್ಟು ಲೋಕ ದೃಷ್ಟಿ ಬದಲಾದ ರಾಜಕೀಯ ಆರ್ಥಿಕ ಸನ್ನಿವೇಶಕ್ಕೆ ತಕ್ಕಂತೆ ಮಾರ್ಪಟ್ಟಿತು. ಸಂಪ್ರದಾಯ ರೂಢಿ ಪದ್ಧತಿಗಳು ಅಮೂಲಾಗ್ರವಾಗಿ ಪರಿವರ್ತನೆ ಹೊಂದುವುದಿಲ್ಲವಾದ್ದರಿಂದ ಅವುಗಳ ಅದಿಮರೂಪಗಳು ಅವಶೇಷಗಳಂತೆ ಉಳಿದವು. ಹೊರಗಿನಿಂದ ಬಂದ ವಿವಿಧ ಬಗೆಯ ಪ್ರಭಾವಗಳನ್ನು ಎದುರಿಸುವ ಪ್ರತಿಭಟಿಸುವ ಮತ್ತು ಅನಿವಾರ್ಯ ಪ್ರಭಾವಗಳಿಗೆ ಒಳಗಾಗುವ ಒಂದು ಲಕ್ಷಣವಂತೂ ಜಾನಪದರ ಚರಿತ್ರೆಯುದ್ದಕ್ಕೂ ಕಂಡು ಬರುವಂತಾಯಿತು.

ಜಾನಪದ ಸಾಹಿತ್ಯ, ಸಂಸ್ಕೃತಿ ಪುರಾತನವಾದದ್ದು ಜನರ ಆಡು ನುಡಿಯ ಭಾಷೆ ಸಾಮಾನ್ಯನಿಗೂ ಅರ್ಥವಾಗುವಂತಹ ಸರಳ ಶೈಲಿಯಲ್ಲಿದೆ. ಜನಪದ ಸಾಹಿತ್ಯ ಸಹಜ ಸ್ಫೂರ್ತಿಯಿಂದ ಬಾಳಿನ ನೇರ ಅನುಭವವನ್ನು ಒಳಗೊಂಡು ನಿರಾಯಾಸವಾಗಿ ಚಿಮ್ಮಿ ಬಂದಿರುವಂತಹದು ಜನಪದ ಕವಿಗಳಲ್ಲಿ ಸಾಹಿತ್ಯ ಸೃಷ್ಟಿಸಬೇಕೆಂಬ ಹಂಬಲವಿರಲಿಲ್ಲ ಅವರ ಪಾಲಿಗೆ ಅದೊಂದು ಸ್ವಭಾವತಹ ಬಂದಂತಹ ಸಹಜಕ್ರಿಯೆ ತಮ್ಮ ಬಾಳಿನ ಮಾರ್ಗದಲ್ಲಿ ಕಂಡ ಕಹಿ-ಸಿಹಿ ಗಳಿಗೆ ರೂಪ ಕೊಟ್ಟು ಅಭಿವ್ಯಕ್ತಪಡಿಸಿದರು. ಅದೇ ಸಾಹಿತ್ಯ ಈ ಅಪೂರ್ವ ಸಾಹಿತ್ಯದ ಸೃಷ್ಟಿಕರ್ತರು ಯಾರೆಂದು ನಿರ್ದಿಷ್ಟವಾಗಿ ಹೇಳಲಾಗದು

ಸಮಷ್ಟಿ ಸೃಷ್ಟಿಯದು. ತನ್ನ ಶೈಲಿಯಿಂದ ಬಹುಸಂಖ್ಯಾತರ ಹೃದಯ ವೀಣೆಯನ್ನು ಮೀಟಬಲ್ಲಂಥ ಶಕ್ತಿ ಪಡೆದಿದ್ದ ಆ ಕವಿಗಳು ಯಾವೊಂದು ಪ್ರತಿಫಲಾಪೇಕ್ಷೆ ಹೊಂದಿರಲಿಲ್ಲ. ಸಾಹಿತ್ಯವನ್ನು ತಾವು ರಚಿಸುತ್ತಿದ್ದೇವೆಂಬ ಅರಿವು ಹಂಬಲ ಎರಡು ಸಹ ಅದರಲ್ಲಿ ಇರಲಿಲ್ಲ ಅವರ ಕಾವ್ಯದ ವಸ್ತು ಅಗೋಚರವಾದುದಲ್ಲ ನಿತ್ಯ ಜೀವನದಲ್ಲಿ ನೋಡಿ ಅನುಭವಿಸಿದ ಘಟನೆಗಳೇ ಆಗಿವೆ. ಉದಾ: ಪುತ್ರನ ಬಗೆಗಿರುವ ವಾತ್ಸಲ್ಯ ತವರಿನ ಬಗ್ಗೆ ಇರುವ ಹಂಬಲ ಅಂದಿನ ಸಮಾಜದ ರೀತಿ, ನೀತಿ ಮುಂತಾದವುಗಳನ್ನು ಜನಪದ ಗೀತೆಗಳಲ್ಲಿ ಚಿತ್ರಿಸಿದ್ದಾರೆ. ಜನಪದ ಗೀತೆಗಳಲ್ಲಿ ಉಪಮೇ ಉಪಮಾನಗಳನ್ನೂ ಸಹ ಕಾಣಬಹುದಾಗಿದೆ. ಜನಪದ ಗೀತೆಗಳ ಲಯದಲ್ಲಿ ಕಂಡುಬರುವ ವೈವಿಧ್ಯ ಸ್ವಾರಸ್ಯಗಳು ಅಪಾರವಾದಂತಹವು ಅವುಗಳಿಗೆ ಲೆಕ್ಕವಿಲ್ಲ. ಅವು ಕಾವ್ಯ ಗುಣವಿಲ್ಲದೆಡೆ ಸೇರಿ ಲಯ ವಿಶಿಷ್ಟವಾಗಿದ್ದು ಗಮನವನ್ನು ಸೆಳೆಯುವುದೂ ಸಹ ಉಂಟು ಲೌಕಿಕ ಜೀವನದಲ್ಲಿ ವ್ಯಕ್ತಿ ಹೊಂದಿರುವ ರೀತಿ ನೀತಿ ಎಲ್ಲವೂ ಸಹ ಮೂಡಿ ಬಂದಿವೆ ಅವರ ಒಂದೊಂದು ತ್ರಿಪದಿಯಲ್ಲಿ ಹುದುಗಿಸಿದ ಜೀವನ ದರ್ಶನ ಮಹತ್ತರವಾದುದಾಗಿದೆ. ಗೋಪಾಲಕೃಷ್ಣ ಅಡಿಗರು ಹೇಳುವಂತೆ " ಕವಿತೆ ಎಂಬುದು ಆಕಾಶದಿಂದ ಇಳಿದುಬರುವ ಗಂಗೆಯಲ್ಲ ನೆಲದಿಂದಲೇ ಚಿಮ್ಮಿ ಬರುವಂತಹ ಕಾರಂಜಿ" ಎಂಬ ಮಾತನ್ನು ಈ ಜನಪದ ಸಾಹಿತ್ಯ ಸತ್ಯವನ್ನಾಗಿಸಿದೆ.

## ಪರಾಮರ್ಶನ ಗ್ರಂಥಗಳು :

೧. ಮುರಳಿ ಕೃಷ್ಣ ಬಿ. ಎಂ. ಕಾಡುಗೊಲ್ಲರ ಕಟ್ಟೆಮನೆ ಮತ್ತು ಆರಾಧ್ಯ ದೈವಗಳು, ಅಂಕನಹಳ್ಳಿ ಪ್ರಕಾಶನ, ರಾಮನಗರ, ೨೦೨೩.

2. ಬೋರಲಿಂಗಯ್ಯ ಹಿ.ಚಿ, ಬುಡಕಟ್ಟು ದೈವರಾಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

3. ಜನಪದ ಸಂಸ್ಕೃತಿ - ಹಿ.ಶಿ. ರಾಮಚಂದ್ರಗೌಡ, ಕರ್ನಾಟಕ ಅಕಾಡೆಮಿ, ಬೆಂಗಳೂರು, ೨೦೦೯.

4. ಕರ್ನಾಟಕದ ಬುಡಕಟ್ಟುಗಳು, ಭಾಗ ೧ ಮತ್ತು ೨: ಸಂ, ಹೆಚ್.ಜೆ. ಲಕ್ಕಪ್ಪ ಗೌಡ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೮೮.

5. ಬಸವರಾಜನೆಲ್ಲಿಸರ ಮತ್ತು ಡಾ.ಸಿ.ಎಸ್. ಶಿವಕುಮಾರಸ್ವಾಮಿ, ಜನಪದ ಸಾಹಿತ್ಯ, ಸಂಪಾದಕರು, ಪ್ರಸಾರಂಗ, ಕುವೆಂಪು ವಿಶ್ವವಿದ್ಯಾನಿಲಯ, ೨೦೦೩.

6. ಹಲಸಂಗಿಯ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ, ಗರತಿ ಹಾಡು, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೦,

7. ಹಾಲತಿ ಸೋಮಶೇಖರ್, ಮಹಿಳಾ ಚಳುವಳಿ, ವಿಸ್ಮಯ ಪ್ರಕಾಶನ, ಕುವೆಂಪು ನಗರ, ಮೈಸೂರು, ೨೦೦೭.

8. ಎಸ್. ಎಸ್. ಹಿರೇಮಠ, ಜನಪದ ಸಮಾಜ ಸಂಸ್ಕೃತಿ, ಸೂರ್ಯಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ, ೨೦೦೫.